ಎತ್ತಿ ಏತ ನೀರಾವರಿ ಯೋಜನೆಯ ಮೂಲಕ 14,904 ಎಕರೆಗೆ ನೀರಾವರಿ ಕಲ್ಪಿಸುವ ಉದ್ದೇಶವಿದೆ. ಈ ಯೋಜನೆಗೆ 0.78 ಟಿಎಂಸಿ ನೀರಿನ ಅವಶ್ಯಕತೆಯಿದ್ದು ಇದರಡಿಯಲ್ಲಿ ಖಾರೀಫ್ – ಅರೆ ನೀರಾವರಿ ಬೆಳೆಗಳನ್ನು ಬೆಳೆಯಲು ಉದ್ದೇಶಿಸಲಾಗಿದೆ.

ಮುಖ್ಯ ಇಂಜಿನಿಯರ್ ಹೇಮಾವತಿ ಜಲಾಶಯ ಯೋಜನೆ ಗೊರೂರು, ಅವರು ಈ ಏತ ನೀರಾವರಿ ಯೋಜನೆಗೆ 1990–91ರ ದರಪಟ್ಟಿಯ ಪ್ರಕಾರ ರೂ. 1005.00 ಲಕ್ಷಗಳಿಗೆ ಅಂದಾಜನ್ನು ಸಿದ್ಧಪಡಿಸಿ ಮೇ 1990ರ ಮಾಹೆಯಲ್ಲಿ ಸರ್ಕಾರಕ್ಕೆ ಕಳುಹಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ನೀಇ 66 ಎನ್ಎಚ್ಪಿ 90 ದಿನಾಂಕ 17–12–1991ರಂದು ಆಡಳಿತಾತ್ಮಕ ಮಂಜೂರಾತಿ ನೀಡಿತು.

ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮೊದಲ ಹಂತವಾಗಿ ಆಗಮನ ಕಾಲುವೆ ಜಾಕ್ವೆಲ್; ರೈಸಿಂಗ್ ಮೈನ್, ವಿತರಣಾ ತೊಟ್ಟಿ ಮತ್ತು ಇದಕ್ಕೆ ಸಂಬಂಧಿಸಿದಂತೆ ಪಂಪು ಮತ್ತು ಮೋಟಾರುಗಳ ವಿನ್ಯಾಸ, ಜೋಡಣೆ ಮತ್ತು ಒಂದು ವರ್ಷ ನಿರ್ವಹಣೆ ಮಾಡಲು ಕೋಟೇಶನ್ಗಳನ್ನು ಟರ್ನ್ ಕೀ ಆಧಾರದಲ್ಲಿ ಮಾರ್ಚ್ 1992ರಲ್ಲಿ ಕರೆದಿದ್ದು ಅವುಗಳನ್ನು ಮುಖ್ಯ ಇಂಜಿನಿಯರ್ರವರು ಆಗಸ್ಟ್ 1992ರಲ್ಲಿ ಸರ್ಕಾರಕ್ಕೆ ಅನುಮೋದನೆಗಾಗಿ ಕೋರುತ್ತಾ ಕಳುಹಿಸಿ ಕೊಟ್ಟಿರುತ್ತಾರೆ. ಸರ್ಕಾರವು ಕೋಟೇಶನ್ಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಿ ಕೋಟೇಶನ್ನಲ್ಲಿ ಕೆಲವಾರು ನ್ಯೂನತೆಗಳು ಕಂಡುಬಂದಿದ್ದರಿಂದ ಈ ಕೆಲಸಕ್ಕೆ ಮತ್ತೊಮ್ಮೆ ಕೋಟೇಶನ್ಗಳನ್ನು ಕೂಡಲೆ ನಿಯಮಾನುಸಾರ ಕರೆಯುವಂತೆ ಮುಖ್ಯ ಇಂಜಿನೀಯರ್ರವರಿಗೆ ಈಗಾಗಲೇ ತಿಳಿಸಿದೆ.

ಈ ಯೋಜನೆಯಡಿಯಲ್ಲಿ ಎಡ ಮತ್ತು ಬಲದಂಡೆ ಕಾಲುವೆಗಳ ಸರ್ವೆ ಕೆಲಸ ನಡೆಯುತ್ತಿದ್ದು ಇದರ ಮಣ್ಣು ಅಗೆತದ ಕೆಲಸವನ್ನು ಶೀಘ್ರದಲ್ಲೇ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

4. 1990ನೇ ಇಸವಿಯ ಕೋಮುಗಲಭೆಗಳಲ್ಲಿ ಉಂಟಾದ ನಷ್ಟಕ್ಕೆ ಪರಿಹಾರ

SRI SADATH ALI KHAN (Channapatna):– Mr Speaker, will the Hon. Chief Minister be pleased to state:

a) whether it is a fact that the Hon. Chief Minister of Karnataka has given assurance on the floor of the Assembly to the following matters;

b) the cases which has been registered during the communal riots during 1990 all over the State to be withdrawn including Sec. 302 of IPC.

c) promise of Government appointments given to their kith and kin (Blood relation) to their family who lost their lives in the communal riots through out the State;

d) the comensation and interest–free loan of Rs.50,000/– to the sufferers who have lost their properties in the communal riots in the State;

e) if so, the reason for inordinate delay to provide Government appointments to their kith and kins which is pending since last three years;

f) the reasons for not releasing the compensation and interest free loan as per reassessment which is also pending since last 3 years;

g) what action has been taken by the Government to release the compensation of Rs. 50,000/– to missing person's family during the communal riots in the State; (three of them in Channapatna Taluk);

h) when all the above matters will be cleared; Definite time limit may be given

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ವಿವರಗಳನ್ನು ಕಲೆ ಹಾಕುತ್ತಿದ್ದೇನೆ. ಅದನ್ನು ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು:– ವಿಧಾನಸಭಾ ಸದಸ್ಯರಾದ ಶ್ರೀ ನಾರಾಯಣರಾವ್ ಮನಹಳ್ಳಿಯವರನ್ನು ದಿನಾಂಕ 21–2–1993ರಂದು 4.15 ಗಂಟೆಗೆ ಬೀದರ್ ಟೌನಿನ ಕೆ.ಇ.ಬಿ. ಕಾಲೋನಿಯಲ್ಲಿ ಸಿ.ಆರ್.ಪಿ.ಸಿ. ಕಾಯಿದೆಯ 144ನೇ ಕಲಮಿನ ಮೇರೆಗೆ ವಿಧಿಸಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ್ದರಿಂದ ಅವರನ್ನು ಬಂಧಿಸಿ ಭಾರತ ದಂಡ ಸಂಹಿತೆಯ 188ರ ಕಲಮಿನ ಮೇರೆಗೆ ಮೊಕದ್ದಮೆಯನ್ನು ದಾಖಲು ಮಾಡಿ ಪೋಲೀಸ್ ಕಸ್ಟಡಿಯಲ್ಲಿಡಲಾಗಿದೆಯೆಂದು ಬೀದರಿನ ಜಿಲ್ಲಾ ಪೊಲೀಸ್ ಅಧಿಕಾರಿಯವರಿಂದ ಸಂದೇಶ ಬಂದಿರುತ್ತದೆ. ಹಾಗೂ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ರುಕ್ಮಯ್ಯ ಪೂಜಾರಿಯವರುಗಳನ್ನು ದಿನಾಂಕ 22–2–1993ರಂದು ಸಂಜೆ 6.15ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ ಸಿ.ಆರ್.ಪಿ.ಸಿ.ಯ ಕಾಯಿದೆ 151 ಮತ್ತು 107ರ ಕಲಂಗಳ ಮೇರೆಗೆ ಬಂಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆಯೆಂದು ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಕೆಂಗೇರಿ ಗೇಟ್ ಪೊಲೀಸ್ ಠಾಣೆ, ಬೆಂಗಳೂರು ಸಿಟಿ ಇವರಿಂದ ಸಂದೇಶ ಬಂದಿರುತ್ತದೆ.

ಶ್ರೀ ಅಜೀಜ್ ಸೇಠ್:– ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಒಂದು ಸ್ಟೇಟ್‌ಮೆಂಟನ್ನು ಮಾಡಬೇಕು.

Mr. SPEAKER:– I am getting it examined.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಅಭಿನಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ

† ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ನಾನು ವಂದನಾಪೂರ್ವಕವಾದ ಬೆಂಬಲವನ್ನು ಸೂಚಿಸುತ್ತಾ, ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಪ್ರಪ್ರಥಮವಾಗಿ ಡಿಸೆಂಬರ್ 6ನೇ ತಾರೀಖಿನ ದಿನ ಮತ್ತು ತದ ನಂತರ ರಾಷ್ಟ್ರಾದ್ಯಂತ ಮತ್ತು ರಾಜ್ಯದಾದ್ಯಂತ ಏನು ಕೋಮು ಗಲಭೆಗಳು ನಡೆಯಿತು, ಅಂತಹ ಸಂದರ್ಭದಲ್ಲಿ ಪೊಲೀಸ್ ಇಲಾಖೆಯವರಿಂದ ಶಾಂತಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯ ಆಯಿತು ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತು ಅದೇ ಸಮಯದಲ್ಲಿ ನೊಂದವರಿಗೆಲ್ಲ ಸೂಕ್ತ ಪರಿಹಾರವನ್ನು ಕೂಡ ಕೊಟ್ಟಾಗಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಆದರೆ ಅದೇ ಸಮಯದಲ್ಲಿ, ಕೋಮು ಗಲಭೆಯನ್ನು ತಡೆಗಟ್ಟುವಂತಹದರಲ್ಲಿ ಲಕ್ಷಾಂತರ ಸಾರ್ವಜನಿಕರು ಶಾಂತಿಪ್ರಿಯರಾಗಿ, ಜಾತ್ಯಾತೀತರಾಗಿ ಪೊಲೀಸರೊಂದಿಗೆ ಸಾಕಷ್ಟು ಸಹಕಾರವನ್ನು ಕೊಟ್ಟು ತಡೆ ಹಾಕಿದರು ಎನ್ನುವ ಮಾತನ್ನು ಹೇಳಿದ್ದರೆ ಬಹಳ ಚೆನ್ನಾಗಿತ್ತೆಂದು ನಾನು ಭಾವಿಸುತ್ತೇನೆ. ಏಕೆ ಶಾಂತಿ ಪ್ರಿಯ, ಜಾತ್ಯಾತೀತ ಶೇಕಡಾ 80 ಭಾಗ ಜನತೆಯ ಮೇಲೆ ಆ ವಿಶ್ವಾಸ, ಅಭಿಮಾನ